ಕ್ರಿ.ಮಿಸ್. ನಂ.94/2021
ಪಿ.ಡಬ್ಲ್ಯೂ : 1

**ದಿನಾಂಕಃ 18.03.2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು :** ಎದುರುದಾರ ಪರ ಎಮ್ ಕೆ ವಕೀಲರಿಂದಃ

ನಮ್ಮ ಮಾವನ ಹೆಸರಿನಲ್ಲಿ ಒಂದು ಜಮೀನು ಇರುವುದು ಗೊತ್ತಿದೆ, ಆದರೆ ಇನ್ನೂಳಿದ ಜಮೀನಗಳ ಬಗ್ಗೆ ಗೊತ್ತಿಲ್ಲ. ನಾನು ಎದುರುದಾರನ ವಿರುದ್ದ 4-5 ಕೇಸಗಳನ್ನು ಮಾಡಿದ್ದೇನೆ ಎಂದರೆ ಸರಿ. ಎದುರುದಾರನು ದಾಂಪತ್ಯ ಹಕ್ಕುಗಳ ಪುನರ್ ಪ್ರಾಪ್ತಿಗಾಗಿ ಡಿಕ್ರಿ ಪಡೆದುಕೊಂಡಿದ್ದರೂ ಸಹ ಆತನೊಂದಿಗೆ ಬಾಳ್ವೆ ಮಾಡಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮಾವನ ಹೆಸರಿನಲ್ಲಿರುವ ಜಮೀನು ಒಣಬೇಸಾಯ ಎಂದರೆ ಸರಿಯಲ್ಲ, ಅದು ನೀರಾವರಿ ಜಮೀನು ಇದೆ. ಈ ಜಮೀನಿನಲ್ಲಿ ವರ್ಷಕ್ಕೆ 2 ಬೆಳೆಗಳನ್ನು ಬೆಳೆಯುತ್ತಾರೆ. ಅದು ಒಣಬೇಸಾಯ ಜಮೀನು ಇದ್ದು, ಅದರಲ್ಲಿ ಎದುರುದಾರನ ತಂದೆ ಒಂದು ಎಕರೆ ಮಾತ್ರ ಭಾಗ ಇದೆ ಎಂದರೆ ಸರಿಯಲ್ಲ.

ಎದುರುದಾರನಿಗೆ 1 ಲಕ್ಷ ರೂ.ಗಳ ಆದಾಯ ಇದೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಹೆಸರಿನಲ್ಲಿ ಮನೆ ಇದ್ದು, ಆದರೆ ಜಮೀನು ಇರುವುದಿಲ್ಲ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಎದುರುದಾರನ ಹೊಲ-ಮನೆ ಇರುವುದಿಲ್ಲ ಹಾಗೂ ಆತನ ಆರೋಗ್ಯ ಚನ್ನಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರನು ಕೂಲಿ ಕೆಲಸಕ್ಕೆ ಹೋದರೆ ದಿನಕ್ಕೆ ರೂ.300 ಗಳು ಮಾತ್ರ ಕೂಲಿ ಸಿಗುತ್ತಿದ್ದು, ಅದು ಕೆಲಸ ಇದ್ದಾಗ ಮಾತ್ರ ಸಿಗುತ್ತದೆ, ಹೀಗಾಗಿ ನಾನು ಕೇಳಿರುವ ಜೀವನಾಂಶ ಕೊಡುವ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರನು ಈರಮ್ಮ ಎನ್ನುವವಳಿಗೆ 2 ನೇ ಮದುವೆ ಆಗಿದ್ದಾನೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರವಿ ತಂದೆ ಮಾನಪ್ಪ ಇವರ ಜೊತೆ ಸಂಬಂಧ

ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣ ನಾನು ಎದುರುದಾರನ ಜೊತೆ ಬಾಳ್ವೆ ಮಾಡಲು ಸಿದ್ದಳಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಸುರಪೂರ.